**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -7144/2022**
**ಚಾಸಾ - 0 1/ ಪ್ರಾಸಾ - 01**

| | |
|---|---|
| ಹೆಸರು | **ಶ್ರೀ ಲಕ್ಷ್ಮಿ** |
| ಗಂಡನ ಹೆಸರು | **ಕೃಷ್ಣ** |
| ವಯಸ್ಸು | **32** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಗೊರಗುಂಟೆ** ಪಾಳ್ಯ |

**ದಿನಾಂಕಃ 30-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮೃತ ಕೃಷ್ಣನವರು ನನ್ನ ಯಜಮಾನರು. ನನಗೆ ಆರೋಪಿಗಳು ಗೊತ್ತು. ದಿ.30-10-2022 ರಂದು ನನ್ನ ಯಜಮಾನರು 3ನೇ ಆರೋಪಿಯ ಬಳಿ ಕೆಲಸಕ್ಕೆ ಹೋಗಿದ್ದರು. ಆ ದಿನ ಮಧ್ಯಾಹ್ನ ನನ್ನಯಜಮಾನರು ನನ್ನ ಜೊತೆ ಮಾತನಾಡಿರುತ್ತಾರೆ. ಆ ದಿನದಂದು ನನ್ನ ಯಜಮಾನರು ಚನ್ನೇನಹಳ್ಳಿಯಲ್ಲಿ ಇರುವ ಕಟ್ಟಡದಲ್ಲಿ ಕೆಲಸವನ್ನು ಮಾಡಿರುತ್ತಾರೆ. ಸಂಜೆ 4 ರಿಂದ 4.30ರ ಸಮಯದಲ್ಲಿ ನನ್ನ ನಾದಿನಿಯಾದ ಚಾಸಾ-4ರವರಿಗೆ ಪೋಲೀಸರು ಕರೆ ಮಾಡಿ ನನ್ನ ಯಜಮಾನರು ಬಿದ್ದು ಮೃತ ಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಚಾಸಾ-4ರವರು ನನಗೆ ಸದರಿ ವಿಷಯವನ್ನು ತಿಳಿಸಿದರು. ನಾನು ಅಲ್ಲಿಗೆ ಹೋಗಿ ನೋಡಲಾಗಿ ಸದರಿ ವಿಷಯವು ನಿಜವಾಗಿತ್ತು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿಗಳು ಯಾರೂ ಅಲ್ಲಿ ಇರಲಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನಿಮ್ಮ ಯಜಮಾನರು 3ನೇ ಆರೋಪಿಯ ಬಳಿ ಕಟ್ಟಡದ ಕಂಬಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.30-09-2022 ರಂದು ನಿಮ್ಮ ಯಜಮಾನರು 3ನೇ ಆರೋಪಿಯ ಬಳಿ ಗಿಡದಪಾಳ್ಯದ ಬಳಿ ಕಟ್ಟಡದ ಕಂಬಿ ಕೆಲಸಕ್ಕೆ ಹೋಗಿದ್ದರು ಮತ್ತು ಸಂಜೆ ಯಾರೋ ಪೋನ್ ಮಾಡಿ ನಿಮ್ಮ ಯಜಮಾನರು ಕೆಲಸ ಮಾಡುತ್ತಿದ್ದಾಗ ಮೃತ ಪಟ್ಟಿರುತ್ತಾರೆ ಎಂದು ತಿಳಿಸಿದ್ದು, ಆಗ ನೀವು, ಚಾಸಾ-4 ಮತ್ತು ಚಾಸಾ-4ರವರ ಯಜಮಾನರಾದ ಚಾಸಾ-6ರವರು ಅಲ್ಲಿಗೆ ಹೋಗಿ ನೋಡಿದಾಗ ವಿಚಾರವು ನಿಜವಾಗಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಿಚಾರ ಮಾಡಲಾಗಿ ದಿ.30-09-2022 ರಂದು ಸಂಜೆ ಸುಮಾರು 4 ಗಂಟೆ ಸಮಯದಲ್ಲಿ ಗಿಡದ ಪಾಳ್ಯದ ಬಳಿ ಇರುವ 3ನೇ ಅಂತಸ್ತಿನ ಕಟ್ಟಡದ ಮೇಲೆ ಕಂಬಿ ಕೆಲಸ ಮಾಡುತ್ತಿದ್ದಾಗ ನಿಮ್ಮ ಯಜಮಾನರು ಕೆಳಗೆ ಬಿದ್ದು, ತಲೆ ಮತ್ತು ಕೈ ಕಾಲುಗಳಿಗೆ ಗಾಯಗಳು ಆಗಿ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕಟ್ಟಡದ ಮಾಲೀಕರಾದ 1ನೇ ಆರೋಪಿ, ಗಾರೇ ಮೇಸ್ತ್ರಿ ಆದ 2ನೇ ಆರೋಪಿ ಮತ್ತು ಕಂಬಿ ಮೇಸ್ತ್ರಿ ಆದ 3ನೇ ಆರೋಪಿಗಳು ಕಟ್ಟಡದ ಕಾಮಾಗಾರಿ ಮಾಡಲು ಯಾವುದೇ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳದೇ ಕಟ್ಟಡಕ್ಕೆ ಯಾವುದೇ ಸುರಕ್ಷಿತ ಸಾಧನಗಳನ್ನು ಅಳವಡಿಸದೇ ನಿರ್ಲಕ್ಷತೆ ವಹಿಸಿದ್ದರಿಂದ ನಿಮ್ಮ ಗಂಡ ಕಟ್ಟಡದ ಮೇಲಿನಿಂದ ಬಿದ್ದು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- 2ನೇ ಆರೋಪಿಯ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದಃ-**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ-1ನ್ನು ಪೋಲೀಸರು ಬರೆದಿರುತ್ತಾರೆ. ನಿಪಿ-1ನ್ನು ಬರೆದಿರುವ ಪೋಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ದಿ.30-09-2022 ರಂದು ಸಂಜೆ 6.30 ರಿಂದ 7 ಗಂಟೆ ಸಮಯದಲ್ಲಿ ಪೋಲೀಸರು ನಿಪಿ-1ನ್ನು ತಾವರೆಕೆರೆ

ಪೋ. ಠಾಣೆಯಲ್ಲಿ ಬರೆದಿರುತ್ತಾರೆ. ನಿಪಿ-1ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ದಿ.30-09-2022 ರಂದು ಸಂಜೆ 6.30 ರಿಂದ 7 ಗಂಟೆ ಸಮಯದಲ್ಲಿ ನಾನು ನಿಪಿ-1ರಂತೆ ದೂರನ್ನು ನೀಡಿರುತ್ತೇನೆ.

02. ನನ್ನ ಯಜಮಾನರು ಸುಮಾರು 10 ರಿಂದ 15 ವರ್ಷಗಳಿಂದ ಕಂಬಿ ಕೆಲಸವನ್ನು ಮಾಡುತ್ತಿದ್ದರು. ಕಳೆದ 6 ವರ್ಷಗಳಿಂದ ನನ್ನ ಯಜಮಾನರು 3ನೇ ಆರೋಪಿಯ ಬಳಿ ಕೆಲಸವನ್ನು ಮಾಡುತ್ತಿದ್ದರು ಮತ್ತು ಅದಕ್ಕೂ ಮೊದಲು ಅವರೇ ಸ್ವಂತವಾಗಿ ಕೆಲಸವನ್ನು ಮಾಡುತ್ತಿದ್ದರು. ನಿಮ್ಮ ಯಜಮಾನರಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತಾ ಎಂದರೆ ಸಾಕ್ಷಿಯು ಮೊದಲು ಮದ್ಯಪಾನ ಮಾಡುತ್ತಿದ್ದರು ಮತ್ತು ಕಂಬಿ ಕೆಲಸ ಮಾಡುವ ಕಾರಣ ಮದ್ಯಪಾನವನ್ನು ಬಿಟ್ಟಿದ್ದರು ಎನ್ನುತ್ತಾರೆ. ನಿಮ್ಮ ಯಜಮಾನರು ಮದ್ಯಪಾನ ಮಾಡುವ ಅಭ್ಯಾಸವನ್ನು ಬಿಟ್ಟಿರಲಿಲ್ಲ ಮತ್ತು ಆ ದಿನದಂದು ಅವರು ಮದ್ಯಪಾನವನ್ನು ಮಾಡಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಯಜಮಾನರು ಮೃತ ಪಟ್ಟಿರುವ ವಿಷಯವನ್ನು ಪೋಲೀಸರು ಚಾಸಾ-4ರವರಿಗೆ ತಿಳಿಸಿದ್ದರು ಮತ್ತು ಅವರು ನನಗೆ ಸದರಿ ವಿಷಯವನ್ನು ತಿಳಿಸಿದರು ಮತ್ತು ಸದರಿ ವಿಷಯವನ್ನು ನಾನು ನಿಪಿ-1ರಲ್ಲಿ ಹೇಳಿರುತ್ತೇನೆ. ನನ್ನ ಯಜಮಾನರು ಸಂಜೆ 4 ರಿಂದ 4.30ರ ಸಮಯದಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ಯಜಮಾನರು ಮೃತ ಪಟ್ಟಿರುವ ವಿಷಯ ತಿಳಿದ ತಕ್ಷಣ ಪೋಲೀಸರು ನನ್ನನ್ನು ಘಟನಾ ನಡೆದ ಸ್ಥಳಕ್ಕೆ ಕರೆದುಕೂಂಡರು ಹೋದರು. ಸಂಜೆ 5 ರಿಂದ 5.30ರ ಸಮಯದಲ್ಲಿ ಪೋಲೀಸರು ನನ್ನನ್ನು ತಾವರೆಕೆರೆಯಿಂದ ಘಟನಾ ನಡೆದ ಸ್ಥಳಕ್ಕೆ ಕರೆದುಕೊಂಡು ಹೋದರು. ನನ್ನ ಜೊತೆ ಬೇರೆ ಯಾರೂ ಸಹ ಇರಲಿಲ್ಲ.

03. ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗುವ ಮೊದಲು ಠಾಣೆಗೆ ಹೋಗಿ ದೂರನ್ನು ನೀಡಲು ಪ್ರಯತ್ನ ಪಟ್ಟಿರುವುದಿಲ್ಲ ಮತ್ತು ಆಗ ದೂರನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಯಾವ ಸಮಯಕ್ಕೆ ಸ್ಥಳಕ್ಕೆ ಹೋದೆನು ಎಂದು ನನಗೆ ಗೊತ್ತಿಲ್ಲ. ಅಲ್ಲಿಂದ ನಾನು ಪುನಃ ಠಾಣೆಗೆ ಬಂದೆನು. ನನ್ನ ಯಜಮಾನರ ಮೃತ ದೇಹವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು ಮತ್ತು ಆ

ಸಮಯದಲ್ಲಿ ನಾನು ಅಲ್ಲಿಗೆ ಹೋಗಲಿಲ್ಲ. ನಿಮ್ಮ ಯಜಮಾನರು 3ನೇ ಆರೋಪಿಯ



ಬಳಿ ಕೆಲಸವನ್ನು ಮಾಡುತ್ತಿದ್ದರು ಮತ್ತು ಅವರಿಗೂ ಮತ್ತು 2ನೇ ಆರೋಪಿಗೂ ಯಾವುದೇ ರೀತಿಯ ಕೆಲಸದ ವ್ಯವಹಾರ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಯಜಮಾನರಿಗೆ 3ನೇ ಆರೋಪಿಯವರು ಸಂಬಳವನ್ನು ನೀಡುತ್ತಿದ್ದರು. 2ನೇ ಆರೋಪಿಯು ನಿಮ್ಮ ಯಜಮಾನರನ್ನು ಕೆಲಸಕ್ಕಾಗಿ ನೇಮಕವನ್ನು ಮಾಡಿಕೊಂಡಿರುವುದಿಲ್ಲ ಮತ್ತು ನಿಮ್ಮ ಯಜಮಾನರು ಮೃತ ಪಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ 2ನೇ ಆರೋಪಿಯ ತಪ್ಪು ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 1ನೇ ಆರೋಪಿಯು 2ನೇ ಆರೋಪಿಯನ್ನು ಮನೆಯ ಕಟ್ಟಡ ನಿರ್ಮಾಣ ಮಾಡಲು ಮಾತ್ರ ನೇಮಕ ಮಾಡಿದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. 1ನೇ ಆರೋಪಿಯು 3ನೇ ಆರೋಪಿಯನ್ನು ಕಂಬಿ ಕೆಲಸ ಮಾಡಲು ಮಾತ್ರ ನೇಮಕ ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಕಂಬಿ ಮತ್ತು ಗಾರೆ ಕೆಲಸ ಬೇರೆ ಆಗಿದೆ ಮತ್ತು ನಿಮ್ಮ ಯಜಮಾನರು ಮೃತಪಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ 2ನೇ ಆರೋಪಿಯ ಪಾತ್ರ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಯಜಮಾನರು ಮದ್ಯಪಾನ ಮಾಡಿ ನಿರ್ಲಕ್ಷತೆಯಿಂದ ಕಟ್ಟಡದಿಂದ ಕೆಳಗೆ ಬಿದ್ದು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪೋಲೀಸರು ಬರೆದಿರುವ ಸುಳ್ಳು ನಿಪಿ-1ರ ಆಧಾರದ ಮೇಲೆ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

1 ಮತ್ತು 3ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ಯಾವುದೇ ಸೂಕ್ತ ಕಾರಣ ನೀಡದೇ ಇದ್ದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -7144/2022**
**ಚಾಸಾ - 0 2/ ಪ್ರಾಸಾ - 02**

| | |
|---|---|
| ಹೆಸರು | **ಚನ್ನ ಕೃಷ್ಣಪ್ಪ** |
| ತಂದೆಯ ಹೆಸರು | **ರಾಮಪ್ಪ** |
| ವಯಸ್ಸು | **60** |
| ಉದ್ಯೋಗ | **-** |
| ವಿಳಾಸ | **ಬೆಂಗಳೂರು** |

**ದಿನಾಂಕಃ 30-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮೃತ ಕೃಷ್ಣನವರು ನನಗೆ ಗೊತ್ತು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. ಸುಮಾರು 2 ವರ್ಷಗಳ ಹಿಂದೆ ಕಂಬಿ ಕೆಲಸವನ್ನು ಮಾಡುತ್ತಿದ್ದಾಗ ಸಂಜೆ 4 ರಿಂದ 4.30 ಗಂಟೆ ಸಮಯದಲ್ಲಿ ಟೀ ಯನ್ನು ಕುಡಿಯಲು ಕೆಳಗೆ ಹೋದಾಗ ಹಿಂದಿನ ರಸ್ತೆಯಲ್ಲಿ ಜನರು ಕೂಗುತ್ತಿದ್ದರು. ಅಲ್ಲಿ ಹೋಗಿ ನೋಡಿದಾಗ ಕೃಷ್ಣರವರು ಕೆಳಗೆ ಬಿದ್ದಿದ್ದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ಹೇಳಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು 3ನೇ ಆರೋಪಿಯ ಬಳಿ ಕಂಬಿ ಕೆಲಸಕ್ಕೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಯು ಸಹ ಕಂಬಿ ಕೆಲಸಕ್ಕೆ ಬರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಗಿಡದ ಪಾಳ್ಯದ ಬಳಿ ಇರುವ ಕಟ್ಟಡಕ್ಕೆ ಕಂಬಿ ಕಟ್ಟಲು ಕಟ್ಟಡದ ಮಾಲೀಕರಾದ 1ನೇ ಅರೋಪಿ ಮತ್ತು ಗಾರೆ ಮೇಸ್ತ್ರಿ 2ನೇ

ಆರೋಪಿಯವರು 3ನೇ ಆರೋಪಿಗೆ ಕೆಲಸವನ್ನು ವಹಿಸಿದ್ದರು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. 3ನೇ ಆರೋಪಿಯು ಸದರಿ ಕಟ್ಟಡಕ್ಕೆ ಕೆಲಸ ಮಾಡಲು ನಿಮಗೆ ಹೇಳಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.30-09-2022 ರಂದು ಬೆಳಗ್ಗೆ ನೀವು ಮತ್ತು ಇತರರು 3ನೇ ಆರೋಪಿಯವರ ಮನೆಯ ಬಳಿ ಹೋಗಿ ಕೆಲಸಕ್ಕೆ ಬೇಕಾದ ಸಾಮಾಗ್ರಿಗಳನ್ನು ತೆಗೆದುಕೊಂಡು ಬೆಳಗ್ಗೆ 11 ಗಂಟೆಗೆ ಗಿಡದಪಾಳ್ಯ ರಸ್ತೆಯಲ್ಲಿಇ ರುವ ಕಟ್ಟಡದ ಕಂಬಿ ಕೆಲಸಕ್ಕೆ ಹೋಗಿ ನೀವು, ಕೃಷ್ಣ, ಚಾಸಾ-3 ಮತ್ತು ಇತರರು ಸೇರಿ ಕಟ್ಟಡದ 2ನೇ ಅಂತಸ್ತಿನ ಮೇಲೆ ಕಂಬಿ ಹಾಕಿ ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮಧ್ಯಾಹ್ನ ಊಟ ಮಾಡಿ ಸಂಜೆ 4 ಗಂಟೆ ಸಮಯದಲ್ಲಿ ಕೆಲಸ ಮಾಡುತ್ತಿದ್ದಾಗ ಕೃಷ್ಣ ಕಟ್ಟಡದ ಮೇಲಿದ್ದ ಪಕ್ಕದ ಸೈಟಿನ ಮೇಲಿದ್ದ ಸೀಮೆಂಟ್ ಚೂರುಗಳ ಗುಡ್ಡೆ ಮೇಲೆ ಬಿದ್ದನು, ನೀವು ಕೆಳಗೆ ಇಳಿದು ಬಂದು ನೋಡುವಾಗ ಕೃಷ್ಣರವರ ತಲೆ, ಕೈ ಕಾಲಿಗೆ ಗಾಯಗಳು ಆಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದರು ಎಂದರೆ ಸಾಕ್ಷಿಯು ಅದನ್ನು ತಾನು ನೋಡಿಲ್ಲ ಎನ್ನುತಾರೆ. ಆರೋಪಿಗಳು ಕಟ್ಟಡದ ಕಾಮಗಾರಿ ಮಾಡಲು ಯಾವುದೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಕಟ್ಟಡಕ್ಕೆ ಯಾವುದೇ ಸುರಕ್ಷಿತ ಸಾಧನಗಳನ್ನು ಅಳವಡಿಸದೇ ನಿರ್ಲಕ್ಷತೆ ವಹಿಸಿದ್ದರಿಂದ ಕೃಷ್ಣನವರು ಕೆಲಸ ಮಾಡುವಾಗ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- 2ನೇ ಆರೋಪಿಯ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದಃ-**

ನನ್ನ ಹೇಳಿಕೆಯಲ್ಲಿ ಇರುವ ವಿಷಯವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ಯಾವ ದಿನಾಂಕದಂದು ಯಾವ ಪೋಲೀಸ್ ಅಧಿಕಾರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ಯಾವ ದಿನಾಂಕದಂದು ಸಂಭವಿಸಿತ್ತು ಎಂದು ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸಮಯದಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನನ್ನು, ಮೃತ ವ್ಯಕ್ತಿ ಮತ್ತು ಚಾಸಾ-3ರವರನ್ನು 3ನೇ ಆರೋಪಿಯು ಕೆಲಸಕ್ಕಾಗಿ ನೇಮಕ ಮಾಡಿರುತ್ತಾರೆ. ನನಗೂ ಮತ್ತು 2ನೇ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ನಿಮಗೆಲ್ಲಾ 3ನೇ ಆರೋಪಿಯೇ ಸಂಬಳವನ್ನು

ನೀಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತಾ ಎಂದರೆ ಸಾಕ್ಷಿಯು ತಾನು ಅವರ ಜೊತೆಯಲ್ಲಿ ಇರಲಿಲ್ಲ ಎನ್ನುತ್ತಾರೆ. ಸದರಿ ಕೃತ್ಯವು ಆಕಸ್ಮಿಕವಾಗಿ ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳ ತಪ್ಪಿ ನಿಂದ ಸದರಿ ಕೃತ್ಯವು ಸಂಭವಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮತ್ತು ಕೃಷ್ಣರವರು ಒಟ್ಟಿಗೆ ಕೆಲಸ ಮಾಡುತ್ತಿದ್ದ ಕಾರಣ ಅವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

1 ಮತ್ತು 3ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ಯಾವುದೇ ಸೂಕ್ತ ಕಾರಣ ನೀಡದೇ ಇದ್ದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -7144/2022**
**ಚಾಸಾ - 03/ ಪ್ರಾಸಾ - 03**

| | |
|---|---|
| ಹೆಸರು | **ಸಿಂಗಾರಿ** |
| ತಂದೆಯ ಹೆಸರು | **ಯಲ್ಲಪ್ಪ** |
| ವಯಸ್ಸು | **55** |
| ಉದ್ಯೋಗ | **ಕಂಬಿ ಕೆಲಸ** |
| ವಿಳಾಸ | **ಚಿಕ್ಕಗೊಲ್ಲರಹಟ್ಟಿ** |

**ದಿನಾಂಕಃ 30-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಮೃತ ಕೃಷ್ಣನವರು ನನಗೆ ಗೊತ್ತು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. ಸುಮಾರು 2 ವರ್ಷಗಳ ಹಿಂದೆ ಕಂಬಿ ಕೆಲಸವನ್ನು ಮಾಡುತ್ತಿದ್ದಾಗ ಸಂಜೆ 4 ರಿಂದ 4.30 ಗಂಟೆ ಸಮಯದಲ್ಲಿ ಟೀ ಯನ್ನು ಕುಡಿಯಲು ಕೆಳಗೆ ಹೋದಾಗ ಹಿಂದಿನ ರಸ್ತೆಯಲ್ಲಿ ಜನರು ಕೂಗುತ್ತಿದ್ದರು. ಅಲ್ಲಿ ಹೋಗಿ ನೋಡಿದಾಗ ಕೃಷ್ಣರವರು ಕೆಳಗೆ ಬಿದ್ದಿದ್ದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ಹೇಳಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು 3ನೇ ಆರೋಪಿಯ ಬಳಿ ಕಂಬಿ ಕೆಲಸಕ್ಕೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಯು ಸಹ ಕಂಬಿ ಕೆಲಸಕ್ಕೆ ಬರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಗಿಡದ ಪಾಳ್ಯದ ಬಳಿ ಇರುವ ಕಟ್ಟಡಕ್ಕೆ ಕಂಬಿ ಕಟ್ಟಲು ಕಟ್ಟಡದ ಮಾಲೀಕರಾದ 1ನೇ ಅರೋಪಿ ಮತ್ತು ಗಾರೆ ಮೇಸ್ತ್ರಿ 2ನೇ

ಆರೋಪಿಯವರು 3ನೇ ಆರೋಪಿಗೆ ಕೆಲಸವನ್ನು ವಹಿಸಿದ್ದರು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. 3ನೇ ಆರೋಪಿಯು ಸದರಿ ಕಟ್ಟಡಕ್ಕೆ ಕೆಲಸ ಮಾಡಲು ನಿಮಗೆ ಹೇಳಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.30-09-2022 ರಂದು ಬೆಳಗ್ಗೆ ನೀವು ಮತ್ತು ಇತರರು 3ನೇ ಆರೋಪಿಯವರ ಮನೆಯ ಬಳಿ ಹೋಗಿ ಕೆಲಸಕ್ಕೆ ಬೇಕಾದ ಸಾಮಾಗ್ರಿಗಳನ್ನು ತೆಗೆದುಕೊಂಡು ಬೆಳಗ್ಗೆ 11 ಗಂಟೆಗೆ ಗಿಡದಪಾಳ್ಯ ರಸ್ತೆಯಲ್ಲಿ ಇ ರುವ ಕಟ್ಟಡದ ಕಂಬಿ ಕೆಲಸಕ್ಕೆ ಹೋಗಿ ನೀವು, ಕೃಷ್ಣ, ಚಾಸಾ-3 ಮತ್ತು ಇತರರು ಸೇರಿ ಕಟ್ಟಡದ 2ನೇ ಅಂತಸ್ತಿನ ಮೇಲೆ ಕಂಬಿ ಹಾಕಿ ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮಧ್ಯಾಹ್ನ ಊಟ ಮಾಡಿ ಸಂಜೆ 4 ಗಂಟೆ ಸಮಯದಲ್ಲಿ ಕೆಲಸ ಮಾಡುತ್ತಿದ್ದಾಗ ಕೃಷ್ಣ ಕಟ್ಟಡದ ಮೇಲಿದ್ದ ಪಕ್ಕದ ಸೈಟಿನ ಮೇಲಿದ್ದ ಸೀಮೆಂಟ್ ಚೂರುಗಳ ಗುಡ್ಡೆ ಮೇಲೆ ಬಿದ್ದನು, ನೀವು ಕೆಳಗೆ ಇಳಿದು ಬಂದು ನೋಡುವಾಗ ಕೃಷ್ಣರವರ ತಲೆ, ಕೈ ಕಾಲಿಗೆ ಗಾಯಗಳು ಆಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದರು ಎಂದರೆ ಸಾಕ್ಷಿಯು ಅದನ್ನು ತಾನು ನೋಡಿಲ್ಲ ಎನ್ನುತಾರೆ. ಆರೋಪಿಗಳು ಕಟ್ಟಡದ ಕಾಮಗಾರಿ ಮಾಡಲು ಯಾವುದೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳದೇ ಕಟ್ಟಡಕ್ಕೆ ಯಾವುದೇ ಸುರಕ್ಷಿತ ಸಾಧನಗಳನ್ನು ಅಳವಡಿಸದೇ ನಿರ್ಲಕ್ಷತೆ ವಹಿಸಿದ್ದರಿಂದ ಕೃಷ್ಣನವರು ಕೆಲಸ ಮಾಡುವಾಗ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- 2ನೇ ಆರೋಪಿಯ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದಃ-**

ನಾನು 3ನೇ ಆರೋಪಿಯ ಬಳಿ ಕೆಲಸವನ್ನು ಮಾಡುತ್ತಿದ್ದೇನು. ಮೃತ ಕೃಷ್ಣರವರು 3ನೇ ಆರೋಪಿಯ ಬಳಿ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಹೇಳಿಕೆಯಲ್ಲಿ ಇರುವ ವಿಷಯವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ಯಾವ ದಿನಾಂಕದಂದು ಯಾವ ಪೋಲೀಸ್ ಅಧಿಕಾರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಅಪಘಾತವು ಯಾವ ದಿನಾಂಕದಂದು ಸಂಭವಿಸಿತ್ತು ಎಂದು ನನಗೆ ಗೊತ್ತಿಲ್ಲ. ಕೃತ್ಯ ನಡೆದ ಸಮಯದಲ್ಲಿ 5 ರಿಂದ 6 ಜನರು ಇದ್ದರು. ಅವರ ಹೆಸರು ಲೋಕೇಶ್ , ರಾಜಣ್ಣ, ಚನ್ನಕೇಶವ ,

ನಾನು ಮತ್ತು ಮೃತ ವ್ಯಕ್ತಿ ಇದ್ದೇವು. ಕೃತ್ಯವು ಹೇಗೆ ಸಂಭವಿಸಿತ್ತು ಎಂದು ನನಗೆ ಗೊತ್ತಿಲ್ಲ. ನನ್ನನ್ನು, ಮೃತ ವ್ಯಕ್ತಿ ಮತ್ತು ಚಾಸಾ-2 ರವರನ್ನು 3ನೇ ಆರೋಪಿಯು ಕೆಲಸಕ್ಕಾಗಿ ನೇಮಕ ಮಾಡಿರುತ್ತಾರೆ. ನನಗೂ ಮತ್ತು 2ನೇ ಆರೋಪಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ನಿಮಗೆಲ್ಲಾ 3ನೇ ಆರೋಪಿಯೇ ಸಂಬಳವನ್ನು ನೀಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಮೃತ ವ್ಯಕ್ತಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಕೃತ್ಯವು ಆಕಸ್ಮಿಕವಾಗಿ ಸಂಭವಿಸಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಗಳ ತಪ್ಪಿನಿಂದ ಸದರಿ ಕೃತ್ಯವು ಸಂಭವಿಸಿರುವುದಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನೀವು ಮತ್ತು ಕೃಷ್ಣರವರು ಒಟ್ಟಿಗೆ ಕೆಲಸ ಮಾಡುತ್ತಿದ್ದ ಕಾರಣ ಅವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

1 ಮತ್ತು 3ನೇ ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ಯಾವುದೇ ಸೂಕ್ತ ಕಾರಣ ನೀಡದೇ ಇದ್ದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**